**O.S. No. 214-2017**

**DW-1**

**ಪರಶುರಾಮ**

**ದಿನಾಂಕಃ 17-10-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ. ಎಂ.ಸಿ.ಹೆಚ್ ವಕೀಲರಿಂದಃ**

6. ನಿಪಿ-1 ನ್ನು ತಯಾರು ಮಾಡಿದ ಸಮಯದಲ್ಲಿ ಸದರಿ ದಾಖಲೆಗೆ ಸಾಕ್ಷಿದಾರರು ಎಂದು ಸಹಿ ಮಾಡಿದ ಶ್ರೀಶೈಲ್ ಬಿರಾದರ ಎನ್ನುವವರ ಮನೆಯಲ್ಲಿ ಬಾಡಿಗೆಗೆ ಇದ್ದೆವು ಎಂದರೆ ನನಗೆ ಗೊತ್ತಿಲ್ಲ ನಿಪಿ-1 ಕ್ಕೆ ನನ್ನ ತಂದೆಯವರು ಸಹ ಸಹಿ ಮಾಡಿದ್ದಾರೆ ಎಂದರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಿಪಿ-1 ಕ್ಕೆ ಉಮಾ ಎಂದು ಸಹಿ ಮಾಡಿದವರು ನನ್ನ ತಾಯಿ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ-1 ಕ್ಕೆ ವಿನಾಯಕ ಎಂದು ಸಹಿ ಮಾಡಿದವರು ನನ್ನ ಅಣ್ಣ ಎಂದರೆ ಸರಿಯಲ್ಲ.

7. ಸಾಕ್ಷಿಗೆ ಪ್ರತಿವಾದಿಯು ಈ ದಾವೆಯಲ್ಲಿ ತಕರಾರು ಹಾಕಲು ನೀಡಿದಾಗ, ತಮ್ಮ ವಕೀಲರಿಗೆ ನೀಡಿದ ವಕಾಲತ್ ನ್ನು ತೋರಿಸಿ, ಅದರಲ್ಲಿರುವ ಸಹಿ ಯಾರದು ಎಂದು ಕೇಳಿದಾಗ, ಸಾಕ್ಷಿಯು ನನ್ನ ತಂದೆಯದು ಎಂದು ನುಡಿದಿರುತ್ತಾರೆ. ಅದೇ ರೀತಿ ನಿಪಿ-3 ರಲ್ಲಿ ಕಾಣುತ್ತಿರುವ ಸಹಿ ಕೂಡಾ ನನ್ನ ತಂದೆಯವರದ್ದು ಎಂದರೆ ಸರಿ. ಆದ್ದರಿಂದ ನಿಪಿ-3 ರಲ್ಲಿ ಮತ್ತು ವಕಾಲತ್ ನಲ್ಲಿ ಇರುವ ಸಹಿಯೇ ನಿಪಿ-1 ರಲ್ಲಿಯೇ ಇದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಕಾಣುತ್ತಿರುವ ಸಹಿಗಳು, ನನ್ನ ತಂದೆ, ನನ್ನ ತಾಯಿ ಹಾಗೂ ನನ್ನ ಅಣ್ಣನದ್ದು ಎಂದು ಗೊತ್ತಿದ್ದರೂ ಸಹಿತ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಿಪಿ-2 ನನ್ನ ತಂದೆಯವರಿಗೆ ಕಳುಹಿಸಿದ ನೋಟಿಸ್ ಎಂದರೆ ಸರಿ. ಸದರಿ ನೋಟಿಸ್ ಗೆ ನನ್ನ ತಂದೆಯವರು ಉತ್ತರ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು 2019 ನೇ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆಯವರು ತೀರಿಕೊಳ್ಳುವ ಸಮಯದವರೆಗೂ ಈ

ದಾವೆಯಲ್ಲಿ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿಲ್ಲ ಎಂದರೆ ಸರಿ. ನಾನು 8ನೇ ತರಗತಿಯಲ್ಲಿರುವಾಗಲೇ ನನ್ನ ತಾಯಿಯವರು ನನಗೆ ವಾದಿಗಳು, ನನ್ನ ತಂದೆಯವರಿಗೆ ಸರಾಯಿ ಕುಡಿಸಿ, ಹೆದರಿಸಿ-ಬೆದರಿಸಿ, ನಿಪಿ-1 ಕ್ಕೆ ಸಹಿ ತೆಗೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಅಂದಾಜು 1987 ರಲ್ಲಿ 8ನೇ ತರಗತಿಯಲ್ಲಿದ್ದೆ.

9. ನಮ್ಮ ತಂದೆಯವರು ವಾದಿಗಳ ಹತ್ತಿರ ಒಂದೇ ಸಲ ಹಣದ ವ್ಯವಹಾರ ಮಾಡಿರುತ್ತಾರೆ. ಸದರಿ ಹಣದ ವ್ಯವಹಾರದ ರೂ.14,000/- ಗಳಿಗೆ ಅಂದಾಜು 1990-1991 ನೇ ಇಸ್ವಿಯಲ್ಲಿ ನನ್ನ ತಂದೆಯವರು ವಾದಿಯಿಂದ ಸದರಿ ಹಣ ಪಡೆದು, 3 ತಿಂಗಳಲ್ಲಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡು, ಒಂದು ದಾಖಲೆಗೆ ನನ್ನ ತಂದೆ ಸಹಿ ಮಾಡಿ ವಾದಿಗೆ ನೀಡಿರುತ್ತಾರೆ, ಅದು ಯಾವ ದಾಖಲೆ ಎಂದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ.

10. ಸದರಿ ದಾಖಲೆ ಎಷ್ಟು ರೂಪಾಯಿಗಳ ಬಾಂಡ್ ತೆಗೆದುಕೊಳ್ಳಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ 3 ತಿಂಗಳ ಒಳಗಾಗಿ ನನ್ನ ತಂದೆಯವರು ಹಣ ವಾಪಸ್ ನೀಡುವುದಾಗಿತ್ತು. ನನ್ನ ತಂದೆಯವರು ದಿಃ 11-12-1989 ರಂದು ರೂ.14,000/- ಗಳ ಹಣವನ್ನು ವಾದಿಯಿಂದ ಪಡೆದಿದ್ದಾರೆ ಎಂದರೆ ಸಾಕ್ಷಿಯು ನನಗೆ ದಿನಾಂಕ ನೆನಪಿಲ್ಲ, ಆದರೆ ರೂ.14,000/- ಗಳ ಹಣವನ್ನು ವಾದಿಯಿಂದ ಪಡೆದಿದ್ದು ನಿಜ ಎಂದು ನುಡಿಯುತ್ತಾರೆ

11. ಸದರಿ ಹಣವನ್ನು ವಾದಿಯವರು ಕರಾರು ಪತ್ರಕ್ಕೆ ಸಂಬಂಧಿಸಿದಂತೆ ರೂ.14,000/- ಗಳ ಹಣವನ್ನು ದಿಃ 11-12-1989 ರಂದು ನನ್ನ ತಂದೆಗೆ ನೀಡಿದ್ದು, ಕೈಗಡ ಸಾಲವಾಗಿ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಅಣ್ಣ ಮದ್ಯವೆಸನಿಗಳಾಗಿರಲಿಲ್ಲ. ರೂ.14,000/- ಗಳ ಹಣವನ್ನು ಸಾಲವಾಗಿ ಪಡೆದಿದ್ದಕ್ಕೆ ಮಾಡಿಕೊಂಡ ದಾಖಲೆಗೆ ನಮ್ಮ ಮನೆಯಲ್ಲಿಯೇ ಸಹಿ ಮಾಡಲಾಗಿತ್ತು, ಆದರೆ ಯವಾಗ ಎಂದು ನನಗೆ ನೆನಪಿಲ್ಲ.

12. ವಾದಿಗೆ ದಾವಾಸ್ವತ್ತಿನ ಕಬ್ಜಾವನ್ನು ಯಾವಾಗ ನೀಡಲಾಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ದಾವಾಸ್ವತ್ತಿನ್ನು ನನ್ನ ತಂದೆಯವರಿಗೆ 10 ವರ್ಷಗಳ ಕಾಲ ಬಾಡಿಗೆದಾರನಾಗಿ ಉಳಿಯಬೇಕು, ತದನಂತರ ಖರೀದಿ ಪತ್ರವನ್ನು ಮಾಡಿಕೊಡುವ ಷರತ್ತಿನಲ್ಲಿ ಮಂಜೂರಿ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದಲೇ ನನ್ನ ತಂದೆಯವರು ವಾದಿಗೆ ನಿಪಿ-1 ರಂತೆ ಖರೀದಿ ಕರಾರು ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

13. ನಾವು ಮತ್ತು ನನ್ನ ತಂದೆಯವರು ವಾದಿಗಳ ವಿರುದ್ದ ಬಾಕಿ ಉಳಿದ ಬಾಡಿಗೆಯನ್ನು ಪಡೆಯಲು ಮತ್ತು ಅವರನ್ನು ಮನೆಯಿಂದ ಹೊರ ಹಾಕಲು ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ದಾಂಡೇಲಿ.**